

# ಗ್ಲೋಬಸ್ ಫ್ಯಾರಿಂಜಿಯಸ್

## ಗಂಟಲಿನಲ್ಲಿ ಏನೋ ಸಿಕ್ಕಿಕೊಂಡ ಅನುಭವ!

ಆತಂಕ ಮತ್ತು ಖಿನ್ನತೆಗಳು ಜೊತೆಗೂಡಿದಾಗ 'ಗಂಟಲಿನಲ್ಲಿ ಏನೋ ಸಿಕ್ಕಿಹಾಕಿಕೊಂಡ ಅನುಭವ' ಆಗುತ್ತದೆ. ಇದಕ್ಕೆ ಮನೋವೈದ್ಯಕೀಯ ಪರಿಭಾಷೆಯಲ್ಲಿ 'ಗ್ಲೋಬಸ್ ಫ್ಯಾರಿಂಜಿಯಸ್' ಎಂದು ಹೆಸರು. ಮನೋವೈದ್ಯರಲ್ಲಿ ಈ ಕಾಯಿಲೆಗೆ ಪರಿಹಾರ ಕಂಡುಕೊಳ್ಳಬಹುದು.

■ ಡಾ. ಕೆ.ಎಸ್. ಶುಭ್ರತಾ

ಕಮಲಮ್ಮನಿಗೆ ಸದಾ ಗಂಟಲಿನಲ್ಲಿ ಏನೋ ವಿಚಿತ್ರ ಅನುಭವ. ಈಕೆ ಈ ಸಮಸ್ಯೆಯಿಂದ ಬಳಲುತ್ತಿರುವುದು ಆರು ತಿಂಗಳೇ ಆಯಿತು. ಊಟ ತಿಂಡಿ ತಿನ್ನುವಾಗ ಅಂತಹ ಸಮಸ್ಯೆ ಇಲ್ಲದಿದ್ದರೂ, ಈ ಅನುಭವ ದಿನವಿಡೀ ಕಾಡುತ್ತಿತ್ತು. ಆರು ತಿಂಗಳ ಹಿಂದೆ ಮೊದಲು ಈ ರೀತಿ ಆದಾಗ ಗಂಟಲಿನಲ್ಲಿ ಏನೋ ಸೋಂಕು ಆಗಿದೆಯೆಂದು ತಿಳಿದರು. ಬಿಸಿ ನೀರು ಕುಡಿದಿದ್ದೇ ಕುಡಿದದ್ದು. ಒಂದು ವಾರವಾದರೂ ಕಡಿಮೆ ಆಗದೇ ಇದ್ದಾಗ, ಕುಟುಂಬ ವೈದ್ಯರಲ್ಲಿ ತೋರಿಸಿ ಸೋಂಕಿಗೆ ಆ್ಯಂಟಿಬಯಾಟಿಕ್ಸ್ ಪಡೆದಿದ್ದಾಯಿತು. ಒಂದು ತಿಂಗಳು ಕಳೆದರೂ, ಈ ಗಂಟಲಿನಲ್ಲಿ ಸಿಕ್ಕಿಕೊಂಡ ಅನುಭವ ಮುಂದುವರೆಯಿತು.

ಈಗ ಕುಟುಂಬ ವೈದ್ಯರು ಹೆಚ್ಚಿನ ಪರೀಕ್ಷೆಗಳನ್ನು ಮಾಡಿಸಬೇಕೆಂದರು. ಟಾನ್ಸಿಲ್ (ಶೀತಗಡ್ಡೆ), ಕ್ಷಯರೋಗದಿಂದ ಕ್ಯಾನ್ಸರ್‌ವರೆಗೆ ಪರೀಕ್ಷೆಗಳಾದವು. ಇಡೀ ದೇಹದ ಸ್ಕ್ಯಾನಿಂಗ್, ವಿಧ ವಿಧ ರಕ್ತ ಪರೀಕ್ಷೆಗಳು ಎಲ್ಲವೂ ನಾರ್ಮಲ್. ಕಮಲಮ್ಮನಿಗೆ ಗಂಟಲಿನಲ್ಲಿ ಸಿಕ್ಕಿಕೊಂಡ ಅನುಭವ ಮಾತ್ರ ಕಡಿಮೆಯಾಗಲಿಲ್ಲ. ಇದರ ಜೊತೆ ಕಮಲಮ್ಮ ಮಂಕಾಗತೊಡಗಿದರು. ದೇವರಿಗೆ ಪೂಜೆ, ಹರಕೆ, ಹೋಮ ಎಲ್ಲ ಮುಗಿದರೂ ಸಮಸ್ಯೆಗೆ ಪರಿಹಾರ ಸಿಗಲಿಲ್ಲ. ಕಡೆಗೆ ಕಮಲಮ್ಮನ ಸಮಸ್ಯೆಗೆ ಪರಿಹಾರ ಸಿಕ್ಕಿದ್ದು ಮನೋವೈದ್ಯರಲ್ಲಿ. 'ಗ್ಲೋಬಸ್ ಫ್ಯಾರಿಂಜಿಯಸ್' ಎಂದು ಕರೆಯುವ ಈ ಕಾಯಿಲೆಗೆ ಕಾರಣವಾಗಿದ್ದು ಕಮಲಮ್ಮನವರಲ್ಲಿದ್ದ ಆತಂಕ ಮತ್ತು ಮಾನಸಿಕ ಖಿನ್ನತೆ.

### ಕಾರಣಗಳು

ಈ ಗ್ಲೋಬಸ್ ಫ್ಯಾರಿಂಜಿಯಸ್ ಸಮಸ್ಯೆಗೆ ಕಾರಣಗಳು ಬೇರೆ ಬೇರೆ ರೀತಿಯಲ್ಲಿ ಪ್ರತಿಪಾದಿಸಲಾಗಿದೆ. ಅನ್ನನಾಳದಲ್ಲಿರುವ ಮೇಲಿನ ಸ್ಪಿಂಕ್ಟರ್ (Sphincter) ಸರಿಯಾಗಿ ಕಾರ್ಯನಿರ್ವಹಿಸದಾಗ, ಅಂದರೆ ಹೆಚ್ಚು ಒತ್ತಡ ಅಥವಾ ಅಗತ್ಯಕ್ಕಿಂತ ಮುಂಚೆಯೇ ಬಂದ್ ಆದಾಗ, ಅಥವಾ ಸರಿಯಾಗಿ ರಿಲ್ಯಾಕ್ಸ್ ಆಗದೇ ಇದ್ದಾಗ ಗ್ಲೋಬಸ್ ಸಂವೇದನೆ ಆಗಬಹುದು.